ತಾರೀಖು 6ನೇ ಏಪ್ರೆಲ್ 1889.

ನಂ. 4.—ಹೊಳಲಕೆರೇ ಆಮಲ್ದಾರ್ ಕೇಶವಯ್ಯಂಗಾರ್‌ಗೆ, 1889ನೇ ಇಸವಿ ಫಿಬ್ರವರಿ 16ನೇ ಮತ್ತುಂ 20ನೇ ನಂಬರ್ ಇಸ್ತಿಹಾರಿನಿಂದ ಕೊಡಲ್ಪಟ್ಟಿದ್ದ 2 ತಿಂಗಳ ಪ್ರಿವಿಲೇಜ್ ರಜಾದ ಪೈಕೆ 33 ದಿವಸಗಳ ರಜಾವನ್ನ ಮಾತ್ರ ಉಪಯೋಗಿಸಿಕೊಂಡಿರುತ್ತಾರಾಗಿ, ಉಪಯೋಗಿಸಿಕೊಳ್ಳದೇ ಬಾಕಿ ಇರುವ ರಜಾವನ್ನ ಅದರ ದೆಕೆಯೀಂದ ರದ್ದುಪಡಿಸೋಣವಾಗಿರುತ್ತದೆ.

ಮೆ॥ ಎಸ್. ಆರ್. ಸುಬ್ಬರಾಯ ಐಯ್ಯರ್ ಯವರು, ಆಬ್ಸೆರ್ ತರಗತಿಯ ಸಬ್ ಜಡ್ಜ್‌ಗಿ ಆಪ್ಟಿಂಗ್ ತರೀಕ್ ನೊಕರ್ರ್ಯಾಡಲ್ಪಟ್ಟು ಮೆ ಸ್ಟರ್ ಶ್ರೀನಿವಾಸಯ್ಯಂಗಾರ್ರು ರಜಾದ ಮೇಲೆ ಇರುವ ಪರ್ಯಂತ, ಮೈಸೂರು ಸಬ್ ಡಿವ್ಜೇ ಕೋರ್ಟಿನ ಜಾಬ್ತಾ ವಹಿಸಿರತಕ್ಕದ್ದು.

ನೆಲವಂಗಲದ ಮುನ್ಸಿಫ್ ಮೆ॥ ಎಸ್. ಎಸ್. ರಾಮಸ್ವಾಮಯ್ಯಂಗಾರ್ರು, ಮೆ॥ ಸುಬ್ಬರಾಯ ಐಯ್ಯರ್‌ಯವರು ರಜಾದ ಮೇಲೆ ಇರುವ ಪರ್ಯಂತ 1ನೇ ಕ್ಲಾಸ್ ಮುನಿಸಿಫರಾಗಿ ಬೆಂಗಳೂರು ಮುನಿಸಿಫ್ ಕೆಲಸವನ್ನ ಆಪ್ಟಿಂಗ್ ತರೀಕ್ ನೋಡತಕ್ಕದ್ದು.

ಮೆ॥ ರಾಮಸ್ವಾಮಯ್ಯಂಗಾರ್ರವರ ಗೈರ್ ಹಾಜರೀ ಕಾಲದಲ್ಲಿ, ಚೀಫ್ ಕೋರ್ಟಿನ ಹೆಡ್ ಟ್ರಾನ್ಸ್‌ಲೆಟರ್ ಮೆ॥ ಬಿ. ರಾಮಸ್ವಾಮಯ್ಯಂಗಾರ್ರು 3ನೇ ಕ್ಲಾಸ್ ಮುನಿಸಿಫರಾಗಿ ನೆಲವಂಗಲದ ಮುನಿಸಿಫ್ ಕೆಲಸವನ್ನ ಆಪ್ಟಿಂಗ್ ತರೀಕ್ ನೋಡತಕ್ಕದ್ದು.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು, ಭೇಟಿ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರೆಟೆರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫೀಸಿನಲ್ಲಿಯಿಡಲ್ಪಟ್ಟಿರುವ ಅರ್ಜೀವೆಹ್ಟಿಗೆಯು ದಿನವಹೀ ಚೀಫ್ ಸೆಕ್ರೆಟೆರಿಯವರಿಂದಲೂ, ಅವರು ಬೆಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರೆಟೆರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗದುಕೊಳ್ಳಲ್ಪಡುವದು.

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕುಂ,
ಆರ್. ವಿಜಯೀಂದ್ರರಾವ್.
ಚೀಫ್ ಸೆಕ್ರೆಟರಿ.

ದಿವಾನರವರು, ಅವರ ಭೇಟಿ ಮಾಡಲಿಚ್ಛೆಯುಳ್ಳ ದೊಡ್ಡಮನುಷ್ಯರುಗಳನ್ನು ಪ್ರತಿ ಶನಿವಾರದ ದಿವಸ ಮಧ್ಯಾನ್ಹ 12 ಘಂಟೆ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೇಟಿವ್ ದೊಡ್ಡಮನುಷ್ಯರುಗಳು ಅವರಿಗೆ ಯಿನ್ನಿವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಹುಕುಂ ಬಮೋಜೀಬ್,
ಕೆ. ಬೋರಸಾಮಿಅಯ್ಯರ್,
ಪ್ರೈವೇಟ್ ಸೆಕ್ರೆಟರಿ.

ವಿದ್ಯಾಭ್ಯಾಸದ ಇಲಾಖೆ.

6ನೇ ಮಾಹೆ ಏಪ್ರೆಲ್ 1889ನೇ ಇಸವಿ.

ಮೈಸೂರು ದೇಶೀಯ ಪರೀಕ್ಷೆ.

ಮೈಸೂರು ದೇಶೀಯ ಪರೀಕ್ಷಾ ಸಂಬಂಧವಾದ ನಿಬಂಧನೆಗಳೂ ಮತ್ತು 1890ನೇ ಇಸವಿಯಲ್ಲಿ ನಡಿಯತಕ್ಕ ಪರೀಕ್ಷೆಗಾಗಿ ನಿರ್ಣಯಿಸಲ್ಪಟ್ಟ ಸಂಗತಿಗಳೂ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಈ ಕೆಳಗೆ ಪ್ರಕಟಿಸಲ್ಪಟ್ಟಿವೆ.

1. ಸದರೀ ಪರೀಕ್ಷೆಯು ಮಿಡಲ್‌ಸ್ಕೂಲ್ ಪರೀಕ್ಷೆಗೆ ಸಮಾನವಾದ್ದಾಗಿರುತ್ತದೆ. ಮತ್ತು ದೇಶಭಾಷೆಯಲ್ಲಿ ಮಾತ್ರ ನಡಿಸಲ್ಪಡುತ್ತದೆ.

2. ಸದರೀ ಪರೀಕ್ಷೆಯು ಪ್ರತಿ ವರ್ಷವೂ (ಅನ್ಯಥಾ ಪ್ರಸಿದ್ಧಪಡಿಸಲ್ಪಟ್ಟರೆ ವಿನಹ) ಫೆಬ್ರವರೀ ತಿಂಗಳಲ್ಲಿ ಪ್ರತಿ ಡಿಸ್ಟ್ರಿಕ್ಟಿನ ಹೆಡ್ ಕ್ವಾರ್ಟರ್ ಅಂದರೆ ಪ್ರಮುಖ ಸ್ಥಳದಲ್ಲಿಯೂ ಮತ್ತು ವರ್ಷ ವರ್ಷಕ್ಕೂ ನಿರ್ಣಯಿಸಲ್ಪಡಬಹುದಾದ ಇತರ ಸ್ಥಳಗಳಲ್ಲಿ ಸಹ ನಡಿಸಲ್ಪಡುವದು. ಈ ಪರೀಕ್ಷೆಗೆ ದರಖಾಸ್ತು ಕೊಡುವ ತಾರೀಖಿಗೆ ಮುಂಚೆ ಆನುನ್ಯೂನತವಾಗಿ 8 ತಿಂಗಳು ಓದುತಲಿದ್ದ ಹಾಗೆ ನಿಶ್ಚಯಿಸಲ್ಪಡುವ ಮೈಸೂರು ದೇಶೀಯ ಸರ್ಕಾರಿ ಮತ್ತು ದ್ರವ್ಯಸಹಾಯ ಪಡೆಯತಕ್ಕ ಪಾಠಶಾಲೆಗಳ ವಾಸ್ತವ್ಯವಾದ ವಿದ್ಯಾರ್ಥಿಗಳೂ ವಿದ್ಯಾರ್ಥಿನೀಯರೂ ಬರಬಹುದಾಗಿರುತ್ತದೆ. ಮತ್ತು ಇತರರು ಸಹ ಕೀರಬಹುದು.

3. ಮದರಾಸ್ ಮಿಡಲ್‌ಸ್ಕೂಲ್ ಅಥವಾ ಅದಕ್ಕೆ ಅಧಿಕವಾದ ತರಗತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದರೆ ವಿನಹ ಮೈಸೂರು ಸರ್ಕಾರದಲ್ಲಿ ದೇಶಭಾಷೆಗೆ ಸಂಬಂಧಪಟ್ಟ ಉದ್ಯೋಗವನ್ನು ಪಡೆಯಲು ಅಪೇಕ್ಷಿಸುವವರು (ಕನ್ನಡವನ್ನು ಬುದು ಭಾಷೆಯಾಗಿ ತೆಗದುಕೊಂಜು) ಈ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು ಅತ್ಯಾವಶ್ಯಕವಾಗಿರುತ್ತದೆ. (1888ನೇ ಇಸವಿ ಏಪ್ರೆಲ್ 12ನೇ ತಾರೀಖಿನ 3ನೇ ನಂಬರ್ ಇಸ್ತಿಹಾರ್‌ನಾಮೆಯನ್ನ ನೋಡತಕ್ಕದ್ದು.)

4. ಸರ್ಕಾರದ ದೇಶಭಾಷಾ ಪಾಠಶಾಲೆಯಲ್ಲಿ ಹಿರೀಮನೆ ಅಂದರೆ ಪ್ಯೂಪಿಲ್ ಟೀಚರ್ ಕೆಲಸವನ್ನ ಅಪೇಕ್ಷಿಸುವವರು ಸಹ ಈ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿರಬೇಕು. ಮತ್ತು ತಕ್ಕಾಲದಲ್ಲಿ ಸರ್ಕಾರ ನಾಕರರಾಗಿರುವ ಪ್ಯೂಪಿಲ್ ಟೀಚರ್‌ಗಳು ಸಹ ತಮ್ಮ ಉದ್ಯೋಗದಲ್ಲಿ ಅಭಿವೃದ್ಧಿಗೆ ಅರ್ಹರಾಗಬೇಕಾದರೆ ಈ ಪರೀಕ್ಷೆಯಲ್ಲಿ ತೇರ್ಗಡೆಯಾಗಬೇಕು.

5. ಸದರೀ ಪರೀಕ್ಷೆಯ ಸಂಗತಿಗಳು ಯಾವವಂದರೆ:—

ಆವಶ್ಯಕ ಸಂಗತಿಗಳು.

1. ಭಾಷೆ.—ಕನ್ನಡ, ತೆಲುಗು, ಅರವ ಅಥವಾ ಹಿಂದುಸ್ತಾನಿ.

i. ಬರವಣಿಗೆ ಮತ್ತು ಅಕ್ಷರ ಸಂಯೋಜನೆ—ಮೇಲಿನ ಪೈಮರೀ ಪರೀಕ್ಷೆಗೆ ಯೋಗ್ಯವಾದ ಬಂದು ಪುಸ್ತಕದಿಂದ ಓದಲ್ಪಡುವ ಬಂದು ಸಂಗತಿಯನ್ನ ಸ್ಪಷ್ಟವಾಗಿಯೂ ಚನ್ನಾಗಿಯೂ ತಪ್ಪಿತವಿಲ್ಲದೆಯೂ ಪದಗಳನ್ನೂ ವಾಕ್ಯಗಳನ್ನೂ ಪ್ರತ್ಯೇಕಿಸಿ ಬರೆಯಬೇಕು.

ii. ವ್ಯಾಕರಣ—ಅಕ್ಷರ ಲಕ್ಷಣ, ಶಬ್ದ ಲಕ್ಷಣ, ವಾಕ್ಯ ಲಕ್ಷಣ.

iii. ಪರೀಕ್ಷಾಗ್ರಂಥ—(ಪ್ರಕಟಿಸಲ್ಪಡಬಹುದಾದ ಗ್ರಂಥ) ಅರ್ಥ ವಿವರಣೆ, ಆರಿಸಿ ತೆಗದುಕೊಳ್ಳಲ್ಪಡತಕ್ಕ ಭಾಗಗಳಲ್ಲಿ (ಸದರೀ ಭಾಗಗಳು ಪ್ರಕಟಿಸಲ್ಪಡುತ್ತವೆ) ಜ್ಞಾಪಕ ಶಕ್ತಿಯಿಂದ 25 ಪಟ್ಟಿಗಳಿಗೆ ಅಧಿಕವಿಲ್ಲದೆ ಬರೆಯುವಿಕೆ; ಕಬ್ದೋತ್ಪತ್ತಿ, ಪೂರ್ವಾ ಪರ ಪ್ರತ್ಯಯಗಳ ಶಕ್ತಿ ಸಾಧನಗಳೂ ಮತ್ತು ಸಾಧಾರಣ ವಾಕ್ಯಗಳ ವಿಭಜನೆ.

II. ಗಣಿತ—ಸಾಧಾರಣ ಮತ್ತು ವಿವಿಧ ಸಂಕಲನ, ವ್ಯವಕಲನ, ಗುಣಾಕಾರ, ಭಾಗಹಾರ, ವಿರೂಪಕರಣ, ಭಿನ್ನರಾಶಿ ಮತ್ತು ದಶಮಾಂಕಭಿನ್ನರಾಶಿಗಳು, ಅನುಪಾತ, ಸರಳಬಡ್ಡಿ (ಇಂಗ್ಲಿಷ್ ಅಂಕೆಗಳನ್ನ ಉಪಯೋಗಿಸತಕ್ಕದ್ದು.)

III. ಭೂಗೋಳ—ಭೂಪಟ, ಇಂಡಿಯಾ ವಿವರವಾಗಿ, ಮುಖ್ಯವಾದ ಸ್ಥಳಗಳನ್ನು, ನದಿ ಪರ್ವತಾದಿಗಳನ್ನು, ಅಳ್ಳಣೆ ಆಯನ ರೇಖೆಗಳನ್ನು ಮತ್ತು ವಿಷುವದ್ರೇಖೆಗಳನ್ನು ತೋರಿಸಿ ನಕ್ಷೆಯನ್ನು ಬರೆಯುವದು.—ಮತ್ತು ಚರಿತ್ರೆ—ಇಂಡಿಯಾ ದೇಶದ ಚರಿತ್ರೆಯ ಮುಖ್ಯ ಸಂಗತಿಗಳು.

ಐಚ್ಛಿಕಾಂಶಗಳು.

I. ಭಾಷೆ.—ಸಂಸ್ಕೃತ, *ಅಥವಾ ಫಾರಸಿ ಅಥವಾ ಮೇಲೆ ಹೇಳಿದ ಆವಶ್ಯಕವಾದ ಭಾಷೆಗಳಲ್ಲಿ ತೆಗದುಕೊಳ್ಳದೇ ಇರುವ ಭಾಷೆಗಳ ಪೈಕೀ ಬಂದು.

i. ಓದಲ್ಪಡುವ ಸುಲಭವಾದ ಬಂದು ಸಂಗತಿಯ ಬರವಣಿಗೆ, ಮತ್ತು ಅಕ್ಷರ ಸಂಯೋಜನೆ.

ii. ವ್ಯಾಕರಣ—ಅಕ್ಷರ ರೂಪಭೇದಗಳು, ವಿಭಕ್ತಿ ರೂಪಗಳು, ಸಾಧಾರಣ ಕ್ರಿಯಾಪದಗಳ ರೂಪಭೇದಗಳು.

iii. ಪರೀಕ್ಷಾಗ್ರಂಥ—(ಪ್ರಕಟಿಸಲ್ಪಡಬಹುದಾದ ಗ್ರಂಥ) ಅರ್ಥವಿವರಣೆ, ಕಬ್ದೋತ್ಪತ್ತಿ, ಪೂರ್ವಾಪರ ಪ್ರತ್ಯಯಗಳ ಶಕ್ತಿ ಸಾಧನಗಳು ಮತ್ತು ಸಾಧಾರಣ ವಾಕ್ಯಗಳ ವಿಭಜನೆ.

iv. ಭಾಷಾಂತರ—(*a*) ವಿದ್ಯಾರ್ಥಿಯು ಪರೀಕ್ಷೆಗೆ ತೆಗದುಕ್ಕೊಳ್ಳುವ ಮೊದಲನೇ ಭಾಷೆಗೆ ನಚನಕಾವ್ಯದ ಸಾಧಾರಣ ಸಂಗತಿಯನ್ನು ಭಾಷಾಂತರ ಮಾಡುವದು.

(*b*) ಸುಲಭವಾದ ವಾಕ್ಯಗಳನ್ನ ವಿದ್ಯಾರ್ಥಿಯು ಪರೀಕ್ಷೆಗೆ ತೆಗದುಕೊಳ್ಳುವ ಮೊದಲನೇ ಭಾಷೆಯಿಂದ ತರ್ಜುಮೆ ಮಾಡುವದು.

II. ಆರೋಗ್ಯಶಾಸ್ತ್ರ)—ಡಾಕ್ಟರ್ ಕನ್ನಿಂಗಹಂ ಸಾಹೇಬರಿಂದ ರಚಿಸಲ್ಪಟ್ಟ ಆರೋಗ್ಯಭೋಧಿನಿ ಮತ್ತು ಆರೋಗ್ಯಪ್ರವೇಶದಾಯಿನಿ, ಇವುಗಳಲ್ಲಿರುವ ಮೇರೆಗೆ.

III. ವ್ಯವಸಾಯ—ಹಾರ್ಮ್ ಸಾಹೇಬರ ವ್ಯವಸಾಯದ ಕ್ರಮ ಭೋಧಿನಿಯಲ್ಲಿ ಹೇಳಿರುವ ಮೇರೆಗೆ. ಅಥವಾ ಕ್ಷೇತ್ರಗಣಿತ—ಡಾಕ್ಟರ್ ಕುಕ್ ಸಾಹೇಬರ ಕ್ಷೇತ್ರಫಲ ಫಿನಫಲದಲ್ಲಿ ಬರೆದಿರುವ ಮೇರೆಗೆ.

IV. ಹೊಲಿಗೆ—ಅಂಚು ಅಥವಾ ಗೋಟು ಕಟ್ಟುವದು, ಸಾಧಾರಣ ಹೊಲಿಗೆ, ರಫೂ ಮಾಡುವದು, ಅಥವಾ ಕಸೂತಿ ಹಾಕುವದು (ಪರೀಕ್ಷೆಗೆ ಬರುವವರು ತಮ್ಮ ಸ್ವಂತ ಪದಾರ್ಥಗಳನ್ನ ತರಬೇಕು.

ಪಾಕಶಾಸ್ತ್ರ)—ಅಡಿಗೆ ಪಾತ್ರೆಗಳ ಉಪಯೋಗಗಳು ಅವುಗಳನ್ನ ಶುದ್ಧ ಮಾಡುವ ವಿಧ ಮತ್ತು ನೇಟಿವ್ ಜನರಲ್ಲಿ ಮಾಡತಕ್ಕ ಸಾಧಾರಣವಾದ ಅಡಿಗೆಯ ಸಾಮಗ್ರಿಗಳ ಪಕ್ವಕ್ರಮ.

6. ಪರೀಕ್ಷೆಗೆ ಬರತಕ್ಕ ಪ್ರತಿ ವಿದ್ಯಾರ್ಥಿಯು ಐಚ್ಛಿಕವಾದ ಸಂಗತಿಗಳ ಪೈಕಿ ಎರಡನ್ನು ತೆಗದುಕೊಳ್ಳಬೇಕು, ಹುಡಿಗಿಯರಾಗಿರುವ ಪಕ್ಷದಲ್ಲಿ ಹೊಲಿಗೆ ಮತ್ತು ಪಾಕಶಾಸ್ತ್ರವನ್ನ ಬಂದು ಸಂಗತಿಯಾಗಿ ತೆಗದುಕೊಳ್ಳುವದು ಆವಶ್ಯಕವಾಗಿರುತ್ತದೆ.

7. ಪರೀಕ್ಷೆಯ ಫಲಿತಾಂಶವು ಸಂಖ್ಯೆಗಳಿಂದ ಪರಿಗಣಿಸಲ್ಪಡುತ್ತದೆ. ಭಾಷಾ ವಿಷಯಗಳಿಗಾಗಿ ಗೊತ್ತು ಮಾಡಲ್ಪಡುವ ನಂಬರಲ್ಲಿ ಅಂದರೆ ಸಂಖ್ಯೆ ಪೈಕಿ ಪ್ರತಿ ಬಂದು ಮುಖ್ಯಾಂಶದಲ್ಲಿಯೂ ಅರ್ಧಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಮೂರರಲ್ಲಿ ಎರಡುಭಾಗಗಳನ್ನೂ—ಮತ್ತು ಉಳಿದ ವಿಷಯಗಳಿಗಾಗಿ ಗೊತ್ತು ಮಾಡಲ್ಪಡುವ ಸಂಖ್ಯೆ ಪೈಕಿ ಪ್ರತಿ ಬಂದು ಮುಖ್ಯಾಂಶದಲ್ಲಿಯೂ ಮೂರರಲ್ಲಿ

*ದೇವನಾಗರೀ ಅಕ್ಷರಗಳಲ್ಲಿ ಬರೆಯಬೇಕು, ಹುಡಿಗಿಯರಿಗೆ ಮಾತ್ರವೆ.

ಬಂದುಭಾಗಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಅರ್ಧವನ್ನೂ ಪಡೆದಂಥವರು,—ಮೊದಲನೇ ತರಗತಿಯಲ್ಲಿ ಸೇರಿಸಲ್ಪಡುವರು ಮತ್ತು ಭಾಷಾ ವಿಷಯಗಳಿಗಾಗಿ ಗೊತ್ತು ಮಾಡಲ್ಪಡುವ ಸಂಖ್ಯೆ ಪೈಕಿ ಪ್ರತಿ ಬಂದು ಮುಖ್ಯಾಂಕದಲ್ಲಿಯೂ ಮೂರರಲ್ಲಿ ಬಂದುಭಾಗಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಎಂಟರಲ್ಲಿ ಮೂರುಭಾಗಗಳನ್ನು,—ಮತ್ತು ಉಳಿದ ವಿಷಯಗಳಿಗಾಗಿ ಗೊತ್ತು ಮಾಡಲ್ಪಡುವ ಸಂಖ್ಯೆ ಪೈಕಿ ಪ್ರತಿ ಬಂದು ಮುಖ್ಯಾಂಕದಲ್ಲಿಯೂ ನಾಲ್ಕರಲ್ಲಿ ಬಂದುಭಾಗವನ್ನೂ ಒಟ್ಟು ಸಂಖ್ಯೆಯ ಮೂರರಲ್ಲಿ ಬಂದುಭಾಗವನ್ನೂ ಪಡೆದಂಥವರು ಎರಡನೇ ತರಗತಿಯಲ್ಲಿ ಸೇರಿಸಲ್ಪಡುವರು. ಹುಡಿಗಿಯರ ವಿಷಯದಲ್ಲಿ ಮೇಲೆ ನಮೂದಿಸಿದ ಭಾಗಗಳ ಪೈಕಿ ನಾಲ್ಕರಲ್ಲಿ ಬಂದುಪಾಲು ಕಡಮೆ ಮಾಡಲ್ಪಡುತ್ತದೆ, ಅಂದರೆ ವಾಸ್ತವ್ಯವಾಗಿ ಹೊಂದಲ್ಪಟ್ಟ ಸಂಖ್ಯೆಗೆ ನಾಲ್ಕರಲ್ಲಿ ಬಂದುಪಾಲು ಸೇರಿಸಲ್ಪಡುವದು.

8. ಪರೀಕ್ಷೆಗೆ ಬರುವ ಪ್ರತಿ ವಿದ್ಯಾರ್ಥಿಯು; ಅಂದರೆ ಎರಡನೇ ಪ್ರಕರಣದಲ್ಲಿ ಹೇಳಿರುವಂಥವರು, ಒಂದು ರೂಪಾಯಿ ರುಸುಂ ಕೊಡಬೇಕಾಗಿರುತ್ತದೆ. ಇತರರು ನಾಲ್ಕು ರೂಪಾಯಿ ಕೊಡತಕ್ಕದ್ದು.

9. ಸದರೀ ಪರೀಕ್ಷೆಗಾಗಿ ದರಖಾಸ್ತುಗಳನ್ನು ಆಯಾ ಪಾಠಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಅಚ್ಚಿನ ನಮೂನೆಯಲ್ಲಿ ಕಳುಹಿಸಿಕೊಡಬೇಕಾಗಿರುತ್ತದೆ, ಅಂಥಾ ನಮೂನೆಗಳು ಉಪಾಧ್ಯಾಯರಿಂದ ಕೊಡಲ್ಪಡುವವು. ದರಖಾಸ್ತುಗಳು ಅಕ್ಟೋಬರ್ 31ನೇ ತಾರೀಖಿಗೆ ಅತಿಕ್ರಮಿಸದಂತೆ ಬೆಂಗಳೂರಲ್ಲಿರುವ ಮೈಸೂರು ದೇಶೀಪರೀಕ್ಷಾ ಮಾನೇಜರವರಲ್ಲಿಗೆ ಬಂದು ಸೇರಬೇಕಾಗಿರುತ್ತದೆ.

10. ಮೈಸೂರು ದೇಶೀಪರೀಕ್ಷೆಯೊಂದಿಗೆ ಉಪಾಧ್ಯಾಯರ ಪರೀಕ್ಷೆಎಂಬ ಬಂದು ಪರೀಕ್ಷೆ ಇಡಲ್ಪಡುವದು. ಸದರೀ ಪರೀಕ್ಷೆಯಲ್ಲಿ ಸರ್ಕಾರೀ ಪಾಠಶಾಲೆಯ ಪ್ಯೂಪಿಲ್ ಟೀಚರ್ ತರಗತಿಗೆ ಅಧಿಕವಾದ ದೇಶಭಾಷೆಯ ಉಪಾಧ್ಯಾಯರುಗಳೆಲ್ಲರೂ (ಬಂದನೇ ದರ್ಜೆಯ ತಾಲ್ಲೂಕು ಮಾಸ್ತರುಗಳು ಹೊರತು) ತಾವು ಬಿಡ್ತಿಗೆ ಅರ್ಹರಾಗಿದ್ದಲ್ಲಿ ತೇರ್ಗಡೆಯಾಗಬೇಕಾದ್ದು ಅವಶ್ಯಕವಾಗಿರುವದೆಂದು ನಿರ್ಣಯಿಸಲ್ಪಟ್ಟ ರುಸುಂ ಕೊಟ್ಟಲ್ಲಿ ಇತರರು ಸಹ ಪರೀಕ್ಷೆಗೆ ಸೇರಿಸಲ್ಪಡುವರು.

II. ಉಪಾಧ್ಯಾಯರ ಪರೀಕ್ಷೆಗೆ ನೇಮಿಸಲ್ಪಟ್ಟಿರುವ ಸಂಗತಿಗಳು ಯಾವವಂದರೆ:—

I. ಭಾಷೆ—ಕನ್ನಡ, ತೆಲುಗು, ಅರವ, ಅಥವಾ ಹಿಂದುಸ್ತಾನಿಯೊಡನೆ ಭಾಷೆಯ ಪಾಠಗಳಲ್ಲಿ ಘನತೆ (ಮುಖ್ಯವಾಗಿ ಉಪಾಧ್ಯಾಯನು ಬೋಧಿಸಬೇಕಾಗುವ ಭಾಷೆ)

i. ಪರೀಕ್ಷಾಗ್ರಂಥ—ನಿರ್ಣಯಿಸಲ್ಪಟ್ಟ ಗ್ರಂಥಗಳಲ್ಲಿನ (ಸದರೀ ಗ್ರಂಥಗಳು ಪ್ರಕಟಿಸಲ್ಪಡುತ್ತವೆ) ಸಂಗತಿಗಳಲ್ಲಿ ಅರ್ಥವಿವರಣೆ, ವ್ಯಾಕರಣ ಪ್ರಶ್ನೆಗಳು, ಮತ್ತು ವಾಕ್ಯವಿಭಜನೆ.

ii. ವ್ಯಾಕರಣ—ಪೂರ್ತಿಯಾಗಿ, ಛಂದೋಲಕ್ಷಣ ಸಹ.

iii. ವಾಕ್ಯರಚನೆ—ಕೊಡಲ್ಪಟ್ಟ ವಿಷಯವನ್ನು ಕುರಿತು ಸರಿಯಾದ ಮತ್ತು ಬಳ್ಳಿಪದಸರಣಿಯಿಂದ ಬರೆಯುವಿಕೆ. ಸರ್ಕಾರೀ ಬರವಣಿಗೆಗಳ ಜ್ಞಾನ.

II. ಗಣಿತಶಾಸ್ತ್ರಗಳು.

i. ಗಣಿತ—ಪೂರ್ತಿಯಾಗಿ
ii. ಬೀಜಗಣಿತ—ಸಾಧಾರಣ ಸಮೀಕರಣಗಳ ವರಿಗೆ } ಇಂಗ್ಲಿಷ್ ಅಂಕೆಗಳನ್ನು ಉಪಯೋಗಿಸಬೇಕು.

iii, ರೇಖಾಗಣಿತ—ಯೂಕ್ಲಿಡ್ 1ನೇ ಪುಸ್ತಕ, ಸುಲಭವಾದ ರೀತಿ ಪ್ರಶ್ನೆಗಳೊಡನೆ.

III. ಭೂಗೋಳ ಮತ್ತು ಚರಿತ್ರೆ—ಭೂಗೋಳ ಮತ್ತು ಇಂಡ್ಯವೇಶದ ಚರಿತ್ರೆಯ ಸಾವಾನ್ಯ ಪರಿಶ್ರಮವಿರಬೇಕು.

IV. ಶಾಸ್ತ್ರ—ಸಾಧಾರಣ ವಸ್ತುಗಳ ಸ್ವಭಾವ. ಭಾಗಗಳ ಸಂಯೋಜನ ಮತ್ತು ಉಪಯೋಗಗಳು ಅಂದರೆ ಜಂತು ಸಸ್ಯ ಲೋಹಾದಿಗಳನ್ನು ಕುರಿತು ಚಿತ್ರಗಳನ್ನಾಗಲಿ ಪದಾರ್ಥಗಳನ್ನಾಗಲಿ ಮುಂದಿಟ್ಟು ಬೋಧಿಸಬೇಕಾದ್ದರ ತಿಳುವಳಿಕೆ.

V. ಪಾಠಶಾಲೆಯನ್ನು ನಡಿಸುವ ಕ್ರಮ. ಸಾಧಾರಣವಾದ ಪಾಠಗಳ ಬೋಧನಾ ಕ್ರಮ, ತರಗತಿಗಳನ್ನು ವಿಭಾಗಿಸುವಿಕೆ, ಆಡಳಿತೆಯ ಕ್ರಮ, ರೆಜಿಸ್ಟರುಗಳನ್ನು ಇಡುವ ರೀತಿ, ಮತ್ತು ಸದರೀ ರೆಜಿಸ್ಟರುಗಳಿಂದ ಕಾಲಕಾಲಕ್ಕೆ ಲೆಕ್ಕಗಳನ್ನು ತಯಾರ್ಮಾಡುವಿಕೆ.

12. ಪರೀಕ್ಷೆಗೆ ಬರುವವರು ಭಾಷಾ ವಿಷಯದಲ್ಲಿ ಪ್ರತಿ ಬಂದು ಮುಖ್ಯಾಂಕದಲ್ಲಿಯೂ ಅರ್ಧಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಮೂರರಲ್ಲಿ ಎರಡು ಭಾಗಗಳನ್ನು,—ಮತ್ತು ಉಳಿದ ವಿಷಯಗಳ ಪ್ರತಿ ಒಂದು ಮುಖ್ಯಾಂಕದಲ್ಲಿಯೂ ಮೂರರಲ್ಲಿ ಒಂದು ಭಾಗಕ್ಕಿಂತ ಕಡಮೆ ಇಲ್ಲದೆಯೂ ಒಟ್ಟು ಸಂಖ್ಯೆಯ ಅರ್ಧವನ್ನೂ ಪಡೆಯಬೇಕು. ಘನತೆಯೊಡನೆ ಹಿಂದುಸ್ತಾನಿಯನ್ನು ತೆಗದ ಕೊಳ್ಳುವದಕ್ಕೆ ಬದರಲ್ಲಿ ಒಂದು ಭಾಗ ಹೆಚ್ಚು ಸಂಖ್ಯೆ ಕೊಡಲ್ಪಡುವದು.

13. ಸರ್ಕಾರಿ ಪಾಠಶಾಲೆಗಳಲ್ಲಿಯೂ ವಿತ್ತ ದ್ರವ್ಯ ಸಹಾಯ ಪಡೆಯುವ ಪಾಠಶಾಲೆಗಳಲ್ಲಿಯೂ ಇರುವ ಉಪಾಧ್ಯಾಯರು ಈ ಪರೀಕ್ಷೆಗೆ ಪ್ರಥಮಾವರ್ತಿ ಉಚಿತವಾಗಿ ದಾಖಲ್ಮಾಡಿಕೊಳ್ಳಲ್ಪಡುವರು ಪರಂತು ತೇರ್ಗಡೆಯಾಗುವವರು ಅನಂತರ ಪರೀಕ್ಷೆಗೆ ಕೀರಲು ಬಂದು ರೂಪಾಯಿ ನಂತೆ ರುಸುಂ ತೆರಬೇಕು. ಇತರರು ಮೂರು ರೂಪಾಯಿನಂತೆ ರುಸುಂ ಕೊಡತಕ್ಕದ್ದು.

14. ಉಪಾಧ್ಯಾಯರ ಪರೀಕ್ಷೆಯ ಬಗ್ಗೆ ದರಖಾಸ್ತುಗಳು, ಅಕ್ಟೋಬರ್ ತಿಂಗಳ 31ನೇ ತಾರೀಖಿಗೆ ಮೇಲ್ಪಡದಂತೆ ಅಚ್ಚು ಹಾಕಲ್ಪಟ್ಟಿರುವ ನಮೂನೆಯಲ್ಲಿ ಮೈಸೂರು ದೇಶೀ ಪರೀಕ್ಷೆಯ ಮಾನೇಜರವರಿಗೆ ಕಳುಹಿಸಲ್ಪಡತಕ್ಕವು. ಸದರೀ ನಮೂನೆಗಳು ಮೇಲ್ಕಂಡವರ ಆಫಿಸಿನಿಂದ ಕೊಡಲ್ಪಡುವವು.

1890ನೇ ಇಸವಿಯ ಭಾಷಾಗ್ರಂಥಗಳು.

1890ನೇ ಇಸವಿಯ ಪರೀಕ್ಷೆಗೋಸ್ಕರ ಮೇಲ್ಕಂಡ ಇದೇ ತಾರೀಖಿನ ಪ್ರಕಟನಾ ಪತ್ರಿಕೆಯನ್ನನುಸರಿಸಿ ಈ ಕೆಳಗೆ ನಮೂದಿಸಿರುವ ಭಾಷಾ ಗ್ರಂಥಗಳು ನಿರ್ಣಯಿಸಲ್ಪಟ್ಟಿರುತ್ತವೆ.

ಮೊದಲನೇ ಅಂದರೆ ಆವಶ್ಯಕಭಾಷೆ.

ವಿದ್ಯಾರ್ಥಿಗಳ ಪರೀಕ್ಷೆ.			ಕಂಪಾತ.
ಕನ್ನಡ	ಪದ್ಯನಾರ (7ನೇ ಅಥವಾ 8ನೇ ಛಾಪೆ) ಪದ್ಯಗಳು 102—301	ಪದ್ಯಗಳು	129—183
ತೆಲಗು ..	ನಳಚರಿತ್ರಂ	ಪುಟಗಳು	1—15
ಅರವ ..	2ನೇ ನಂಬರ್ ನೀತಿಮಂಜರಿ	ಪದ್ಯಗಳು	123—200
ಹಿಂದುಸ್ತಾನಿ ..	ಮಜಮು ಅ.—ಇ.—ಸುಖ್ 1ನೇ ಭಾಗ, ಸಂಪೂರ್ಣವಾಗಿ	ಪುಟಗಳು	1—16

ಎರಡನೇ ಅಂದರೆ ಐಚ್ಛಿಕ ಭಾಷೆ.

ಸಂಸ್ಕೃತ ..	ರಘುವಂಶ, ಸರ್ಗಗಳು 1 ಮತ್ತು 2
ಫಾರಸಿ ..	ಗುಲಿಸ್ತಾ 7ನೇ ಅಧ್ಯಾಯ ಪ್ರಸ್ತಾವನೆ ಯೊಡನೆ.
ಕನ್ನಡ ತೆಲುಗು ಅರವ ಹಿಂದುಸ್ತಾನಿ	ಮೊದಲನೇ ಅಂದರೆ ಆವಶ್ಯಕಭಾಷೆಗೆ ನಿಷ್ಕರ್ಷೆ ಮಾಡಲ್ಪಟ್ಟ ಹಾಗೆ

ಉಪಾಧ್ಯಾಯರ ಪರೀಕ್ಷೆ

ಭಾಷೆ.

ಕನ್ನಡ ..	ಜೈಮಿನಿ ಭಾರತ, ಸಂಧಿಗಳು 18ರಿಂದ ಕಡೇವರಿಗೆ ಪಂಚತಂತ್ರ (ಮೈಸೂರು ಗವರ್ಮೆಂಟ್ ಪ್ರೆಸ್ ಅಂದರೆ ಮುದ್ರಾಶಾಲೆಯಲ್ಲಿ ಛಾಪಿಸಲ್ಪಟ್ಟ ಪ್ರತಿ)
ತೆಲಗು ..	ಭಾರತಮು (ಸಭಾ ಪರ್ವಮು) ಪಂಚತಂತ್ರಮು
ಅರವ ..	ಭಾರತವೆಣ್ಬಾ, ಪಂಚತಂತ್ರಂ
ಹಿಂದುಸ್ತಾನಿ ಮತ್ತು ಫಾರಸಿ:—	ಬೋಸ್ತಾ, ಅಧ್ಯಾಯಗಳು 1 ಮತ್ತು 5 ಮತ್ತು 8ರಿಂದ 10ರ ವರಿಗೆ ಪ್ರಸ್ತಾವನೆಯೊಡನೆ
.. ..	ಇಖ್ವಾಕ್ ಉನ್ಸಫ, ಸಂಪೂರ್ಣವಾಗಿ. —
	ಅನ್ವಾರಿಸುಹೇಲಿ ಅಧ್ಯಾಯಗಳು 4—8 ಪ್ರಸ್ತಾವನೆ ಯೊಡನೆ.

ಎಲ್. ರೈಸ್,
ಎಜ್ಯುಕೇಷನ್ ಸೆಕ್ರೆಟರಿ.